ವಿಷಯ : ಮೂರು ರಾಜ್ಯಗಳಿಗೆ ಸೇರಿಸಿ ಪರವಾನಗಿ ಮಂಜೂರಾತಿ ನೀಡುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 162 (719)

ಶ್ರೀ ಖಮರುಲ್ ಇಸ್ಲಾಂ (ಗುಲ್ಬರ್ಗಾ) :-ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಗುಲ್ಬರ್ಗಾ ಜಿಲ್ಲೆಯು ಎರಡು ಗಡಿ ರಾಜ್ಯಗಳಿಗೆ ಹತ್ತಿರವಿದ್ದ ಹಳೆಯ ಟಾಕ್ಸಿಗಳು ಕರ್ನಾಟಕ ರಾಜ್ಯ ರಹದಾರಿಯನ್ನು ಹೊಂದಿದ್ದು, ಅಂತರರಾಜ್ಯ ರಹದಾರಿಯನ್ನು ಕರ್ನಾಟಕ, ಆಂಧ್ರ, ಮಹಾರಾಷ್ಟ್ರಗಳಲ್ಲಿ ಸಂಚರಿಸಲು ನೀಡುವ ಪ್ರಸ್ತಾಪನೆಯು ಸರ್ಕಾರದ ಮುಂದೆ ಇದೆಯೇ;

ಆ) ಹಾಗಿದ್ದಲ್ಲಿ ಇದನ್ನು ಯಾವಾಗ ಜಾರಿಗೊಳಿಸುತ್ತೀರಿ?

ಶ್ರೀ.ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :-

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ವಿಷಯ : ಮೂರ್ತೆದಾರರ ಕ್ಷೇಮ ನಿಧಿ ಬಳಕೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 163 (679)

ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ) :- ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂರ್ತೆದಾರರ ಕ್ಷೇಮ ನಿಧಿಗೆ ಸರ್ಕಾರ ಎಷ್ಟು ದೇಣಿಗೆ ಕೊಡಲಾಗಿದೆ?

ಆ) ಈ ಕ್ಷೇಮ ನಿಧಿಯನ್ನು ಯಾವ ರೀತಿಯಲ್ಲಿ ಬಳಸಲಾಗುವುದು?

ಇ) ಇದರ ಅನುಷ್ಠಾನ ಯಾವಾಗ ಮತ್ತು ಯಾರ ಮುಖೇನ ನಡೆಯುವುದು?

ಈ) ಬಡ ಮೂರ್ತೆದಾರರ ಸರ್ವತೋಮುಖ ಅಭಿವೃದ್ಧಿ ದೃಷ್ಟಿಯಲ್ಲಿ ರಚಿಸಲಾದ ಈ ನಿಧಿಯು ಅನುಷ್ಠಾನಗೊಳ್ಳುವುದರಲ್ಲಿರುವ ತೊಡಕುಗಳೇನು?

ಶ್ರೀ.ರಮಾನಾಥರೈ (ಅಬಕಾರಿ ರಾಜ್ಯ ಸಚಿವರು) :-

ಅ) ಮುಖ್ಯಮಂತ್ರಿಗಳು, 1994-95ರ ಆಯವ್ಯಯ ಭಾಷಣದಲ್ಲಿ ಮೂರ್ತೆದಾರರ ಕ್ಷೇಮ ನಿಧಿಗೆ ಎರಡು ಕೋಟಿ ರೂ.ಗಳನ್ನು ಕೊಡಲು ಸರ್ಕಾರ ಆಶ್ವಾಸನೆ ನೀಡಿದೆ.

ಆ) ಈ ಕ್ಷೇಮ ನಿಧಿಯಲ್ಲಿರುವ ಹಣವನ್ನು ಮೂರ್ತಿದಾರರ ಮಕ್ಕಳ ವಿದಾಭ್ಯಾಸ ಮತ್ತು ಸಾಮಾಜಿಕ ನೆರವಿಗಾಗಿ ಬಳಸಲಾಗುವುದು.